Web site: www.cescmysore.org
CIN: U40109KA2004SGC035177

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ, ಮೈಸೂರು

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿರುತ್ತದೆ)

ದೂರವಾಣಿ ಸಂಖ್ಯೆ : 0821 – 2417106
ಫ್ಯಾಕ್ಸ್ ಸಂಖ್ಯೆ :: 0821 – 2417105
E-mail: cfoj@cescmysore.org

ನಿಗಮ ಕಾರ್ಯಾಲಯ,
ನಂ 29, ವಿಜಯನಗರ, 2ನೇ ಹಂತ, ಹಿನಕಲ್
ಮೈಸೂರು-570017.

ಕ್ರಮಾಂಕ: ಸೆಸ್ಕ್/ಮುಆಅ/ಯೋಜನಾ ಶಾಖೆ/ Cys-713
ಲಗತ್ತು: ಎರಡು

ದಿನಾಂಕ: - 4 SEP 2020

ಗೆ,

ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ)
ಚಾವಿಸನಿನಿ, ಕಾರ್ಯ ಮತ್ತು ಪಾಲನೆ ವೃತ್ತ.

**ಅತೀ ಮುಖ್ಯ ಮತ್ತು ಜರೂರು**

ಮಾನ್ಯರೆ,

ವಿಷಯ:ಐಪಿಡಿಎಸ್ ಮತ್ತು ಡಿ.ಡಿ.ಯು.ಜಿ.ಜೆ.ವೈ ಯೋಜನಾ ಕಾಮಗಾರಿಯ ಅನುಷ್ಠಾನ ಸಂಬಂಧ ಭರಿಸಿರುವ ವೆಚ್ಚದ ವಿವರಗಳನ್ನು ನಿಗದಿತ ನಮೂನೆಯಲ್ಲಿ ಸಲ್ಲಿಸುವ ಬಗ್ಗೆ-ಕೇಂದ್ರ ಸರ್ಕಾರದಿಂದ ಅನುದಾನ ಸ್ವೀಕರಣೆ ಹಾಗೂ ಅಂತಿಮ ವರದಿ ಸಲ್ಲಿಸುವಿಕೆಗಾಗಿ.

ಉಲ್ಲೇಖ:-
1. ಈ ಕಛೇರಿ ಪತ್ರ ಸಂಖ್ಯೆ ಸೆಸ್ಕ್/ಮುಆಅ/ಆಕಾ/ಯೋಜನೆ/ Cys-697/ 01.09.2020
2. ಈ ಕಛೇರಿ ಪತ್ರ ಸಂಖ್ಯೆ ಸೆಸ್ಕ್/ಮುಆಅ/ಆಕಾ/ಯೋಜನೆ/ Cys-711/ 04.09.2020
3. ಈ ಕಛೇರಿ ಪತ್ರ ಸಂಖ್ಯೆ ಸೆಸ್ಕ್/ಮುಆಅ/ಆಕಾ/ಯೋಜನೆ/ Cys-319/ 03.01.2020
4. ಈ ಕಛೇರಿ ಪತ್ರ ಸಂಖ್ಯೆ ಸೆಸ್ಕ್/ಮುಆಅ/ಆಕಾ/ಯೋಜನೆ/ Cys-169/ 02.12.2019
5. ಈ ಕಛೇರಿ ಪತ್ರ ಸಂಖ್ಯೆ ಪ್ರವ್ಯ/ಉಪ್ರವ್ಯ-2/ಸಪ್ರವ್ಯ(ಯೋಜನೆ-ಲೆಕ್ಕಗಳು)/2019-20/Cys-1190/ 05.12.2019
6. ಈ ಕಛೇರಿ ಅ.ಜ್ಞಾಪತ್ರ ಸಂಖ್ಯೆ ಸೆಸ್ಕ್/ಮುಆಅ/ಆಕಾ/ಯೋಜನೆ/ Cys-5/05.07.2019
7. ಈ ಕಛೇರಿ ಸಭಾ ಸೂಚನಾ ಪತ್ರ ಸಂಖ್ಯೆ ಸೆಸ್ಕ್/ಮುಆಅ/ಆಕಾ/ಯೋಜನೆ/ Cys-346/ 12.06.2019
8. ಈ ಕಛೇರಿ ಸಭಾ ಸೂಚನಾ ಪತ್ರ ಸಂಖ್ಯೆ ಮುಆಅ/ಪ್ರವ್ಯ(ಲೆ&ಕಂ)/ಉಪ್ರವ್ಯ(ಲೆಕ್ಕ&ಕಂ)/ 2019-20/ Cys-568/25.07.2019
9. ಈ ಕಛೇರಿ ಪತ್ರ ಸಂಖ್ಯೆ ಸೆಸ್ಕ್/ಮುಆಅ/ಆಕಾ/ಯೋಜನೆ/ Cys-456/ 05.07.2019
10. ಈ ಕಛೇರಿ ಪತ್ರ ಸಂಖ್ಯೆ ಪ್ರವ್ಯ/ಉಪ್ರವ್ಯ-2/ಸಪ್ರವ್ಯ(ಯೋಜನೆ-ಲೆಕ್ಕಗಳು)/ Cys-203/ 08.05.2019

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಚಾವಿಸನಿನಿ ವ್ಯಾಪ್ತಿಯಲ್ಲಿ ಕೈಗೊಂಡಿರುವ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸುವ ಸಂಬಂಧ ಸದರಿ ಯೋಜನೆಗಳಿಗೆ ಭರಿಸುವ ವೆಚ್ಚಗಳನ್ನು ಏಕರೂಪದಲ್ಲಿ ಲೆಕ್ಕೀಕರಿಸುವ ಬಗ್ಗೆ, ಹಾಗೂ ಆಸ್ತೀ ವರ್ಗೀಕರಣಕ್ಕೆ ಪ್ರತ್ಯೇಕ ರಿಜಿಸ್ಟರ್ ನಿರ್ವಹಣೆ/ಷೆಡ್ಯೂಲ್ ನಿರ್ವಹಣೆ ಬಗ್ಗೆ ಅನುಸರಿಸಬೇಕಾದ ಕ್ರಮಗಳ ಬಗ್ಗೆ ಹಾಗೂ ಮಾಹಿತಿಗಳನ್ನು ಒದಗಿಸಲು ಸೂಚಿಸಿ ಈಗಾಗಲೇ ಉಲ್ಲೇಖ(3)ರಿಂದ (10)ರ ಪತ್ರಗಳಲ್ಲಿ ಸೂಚನೆಯನ್ನು ನೀಡಲಾಗಿರುತ್ತದೆ.

ಡಿ.ಡಿ.ಯು.ಜಿ.ಜೆ.ವೈ ಮತ್ತು ಐ.ಪಿ.ಡಿ.ಎಸ್ ಯೋಜನಾ ಕಾಮಗಾರಿ ಅನುಷ್ಠಾನ ಸಂಬಂಧ ಆರ್ಥಿಕ ಪ್ರಗತಿಯ ವಿವರಗಳನ್ನು ವಿಭಾಗಗಳಿಗೆ ಈಗಾಗಲೇ ಒದಗಿಸಲಾಗಿರುವ ಅನುಬಂಧ 1,2,3 ಮತ್ತು ಇತರೆ ಪೂರಕ ಅನುಬಂಧಗಳೊಂದಿಗೆ ವಿವರಗಳನ್ನು ಒದಗಿಸುವಂತೆ ಉಲ್ಲೇಖ(1) ಮತ್ತು (2)ರಲ್ಲಿ ವಿಭಾಗಗಳಿಗೆ ಸೂಚಿಸಲಾಗಿದೆ. ಸದರಿ ಪ್ರತಿಯನ್ನು ಈ ಪತ್ರದ ಜೊತೆಯಲ್ಲಿ ಸೂಕ್ತ ಕ್ರಮಕ್ಕಾಗಿ ಲಗತ್ತಿಸಿದೆ.

ಪ್ರಸ್ತುತ ಮೇಲ್ಕಂಡ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಮಹಾಲೇಖಪಾಲಕರು Performance Audit ಕಾರ್ಯವನ್ನು ಕೈಗೊಂಡಿರುವ ಹಿನ್ನೆಲೆಯಲ್ಲಿ ಅವರಿಗೆ ಮಾಹಿತಿಯನ್ನು ಒದಗಿಸಬೇಕಾಗಿರುವ ಹಿನ್ನೆಲೆಯಲ್ಲಿ ಹಾಗೂ ಅನುದಾನದ ಸ್ವೀಕರಣೆ, ಅಂತಿಮ ವರದಿ ಅಂಗೀಕಾರಕ್ಕಾಗಿ ಕೇಂದ್ರ ಸರ್ಕಾರದ ನೋಡಲ್ ಏಜೆನ್ಸಿರವರಿಗೆ ಮಾಹಿತಿಯನ್ನು ಒದಗಿಸಬೇಕಾಗಿರುವುದರಿಂದ ತಮ್ಮ ವೃತ್ತ ವ್ಯಾಪ್ತಿಗೆ ಸಂಬಂಧಿಸಿದ ವಿಭಾಗಗಳಿಂದ ವಿವರಗಳನ್ನು ಪೂರೈಸಲು ತಮ್ಮ ವೃತ್ತ ಕಛೇರಿಯಿಂದ ಒಬ್ಬರು ಅಧಿಕಾರಿ ಮತ್ತು ವಿಷಯ ನಿರ್ವಹಕರನ್ನು ನಿಯೋಜಿಸಿ ಮಾಹಿತಿಯನ್ನು ನಿಗಮ ಕಛೇರಿಗೆ ದಿನಾಂಕ 09.09.2020ರ ಒಳಗಾಗಿ ಸಲ್ಲಿಸಲು ಕ್ರಮವಹಿಸುವಂತೆ ಕೋರಿದೆ. ಸದರಿ ನಿಯೋಜಿತ ಅಧಿಕಾರಿಗಳು ಎಲ್ಲಾ ಪಾವತಿಯ ವಿವರಗಳು ದಾಖಲಾಗಿರುವ ಬಗ್ಗೆ ಹಾಗೂ ಸಾಮಗ್ರಿವಾರು ಪೂರೈಕೆ, ಅಳವಡಿಕೆ ಮತ್ತು ಆಸ್ತೀ ವರ್ಗೀಕರಣ ತಾಳೆಯಾಗಿರುವ ಬಗ್ಗೆ ಗಮನವನ್ನು ಕೇಂದ್ರೀಕರಿಸುವಂತೆ ತಿಳುವಳಿಕೆ ನೀಡುವುದು.

ತಮ್ಮ ವಿಶ್ವಾಸಿ

ಮುಖ್ಯ ಆರ್ಥಿಕ ಅಧಿಕಾರಿ
ಚಾವಿಸನಿನಿ, ಮೈಸೂರು.

ಪ್ರತಿಗಳು:-

1. ಮುಖ್ಯ ಪ್ರಧಾನ ವ್ಯವಸ್ಥಾಪಕರು(ಆಂ.ಪ)/ಚಾವಿಸನಿನಿ, ನಿಗಮ ಕಛೇರಿ, ಮೈಸೂರುರವರ ಅವಗಾಹನೆಗಾಗಿ.
2. ಮುಖ್ಯ ಇಂಜಿನಿಯರ್(ವಿದ್ಯುತ್), ಕಾ ಮತ್ತು ಪಾ ವಲಯ, ಚಾವಿಸನಿನಿ, ಮೈಸೂರು/ಹಾಸನ.
3. ನಿಯಂತ್ರಣಾಧಿಕಾರಿ, ಕಾ ಮತ್ತು ಪಾ ವಲಯ, ಚಾವಿಸನಿನಿ, ಮೈಸೂರು/ಹಾಸನ.
4. ಪ್ರಧಾನ ವ್ಯವಸ್ಥಾಪಕರು (ಯೋಜನಾ ಶಾಖೆ)/ (ಲೆಕ್ಕ ಮತ್ತು ಕಂ) ಚಾವಿಸನಿನಿ, ನಿಗಮ ಕಛೇರಿ,ಮೈಸೂರು.
5. ಎಲ್ಲಾ ಉಪಲೆಕ್ಕನಿಯಂತ್ರಣಾಧಿಕಾರಿ, ಕಾರ್ಯ ಮತ್ತು ಪಾಲನಾ ವೃತ್ತ, ಚಾವಿಸನಿನಿ.
6. ಉಪ ಪ್ರಧಾನ ವ್ಯವಸ್ಥಾಪಕರು(ಲೆಕ್ಕ ಮತ್ತು ಕಂ)/(ಬಿ&ಆರ್)/ ಚಾವಿಸನಿನಿ, ನಿಗಮ ಕಛೇರಿ,ಮೈಸೂರು.
7. ಉಪ ಪ್ರಧಾನ ವ್ಯವಸ್ಥಾಪಕರು, (ಎಂಐಎಸ್), ಚಾವಿಸನಿನಿ ನಿಗಮ ಕಛೇರಿ, ಮೈಸೂರುರವರ ಮಾಹಿತಿಗಾಗಿ ಹಾಗೂ ಪತ್ರವನ್ನು ಚಾವಿಸನಿನಿ ಅಂತರ್ಜಾಲದಲ್ಲಿ ಪ್ರಕಟಿಸುವುದಕ್ಕಾಗಿ.
8. ಮಾನ್ಯ ವ್ಯವಸ್ಥಾಪಕ ನಿರ್ದೇಶಕರುರವರ ಆಪ್ತ ಕಾರ್ಯದರ್ಶಿರವರ ಮಾಹಿತಿಗಾಗಿ.
9. ಸಹಾಯಕ ಪ್ರಧಾನ ವ್ಯವಸ್ಥಾಪಕರು(ಲೆಕ್ಕಗಳು)/(ಹಣಕಾಸು/ಸಂಪನ್ಮೂಲ), ಚಾವಿಸನಿನಿ, ನಿಗಮ ಕಛೇರಿ,ಮೈಸೂರು.
10. ಮುಖ್ಯ ಆರ್ಥಿಕ ಅಧಿಕಾರಿಯವರ ವಿಶೇಷ ಅಧಿಕಾರಿಯವರ ಮಾಹಿತಿಗಾಗಿ.
11. ಪ್ರಕ/ಕ.